**ಸಿಸಿ ಸಂಖ್ಯೆ: 986/2021**

**ಪ್ರಾಸಾಃ 1**

**<u>ದಿನಾಂಕ 17.2.2025 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾಗಿ ಪ್ರಮಾಣವಚನ ಭೋಧಿಸಲಾಯಿತು.</u>**

<u>ಮುಂದುವರಿದ ಮುಖ್ಯ ವಿಚಾರಣೆ ಮಾನ್ಯ ಸ. ಸ. ಅ. ರವರಿಂದಃ</u>

ಆರೋಪಿತರಲ್ಲಿ 1ನೇ ಆರೋಪಿಯನ್ನು ನೋಡಿದರೆ ಗುರುತಿಸಬಲ್ಲೆ, ಉಳಿದ ಆರೋಪಿತರು ಓಡಿಹೋಗಿರುತ್ತಾರೆ. ಸಾಕ್ಷಿ ನ್ಯಾಯಾಲಯದ ಮುಂದಿರುವ 1ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ವರದಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ2 ಎಂದು ಸಾಕ್ಷಿ ಸಹಿಯನ್ನು ನಿಪಿ2(ಎ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ 1 ರಿಂದ 10ನೇ ಆರೋಪಿ ಪರ ಶ್ರೀ. ಎಸ್.ಪಿ ವಕೀಲರಿಂದಃ</u>

ನಿಮ್ಮ ವಾಹನವನ್ನು ನಿಲ್ಲಿಸಿ ಎಷ್ಟು ದೂರದಿಂದ ಆರೋಪಿತರನ್ನು ನೋಡಿದ್ದೀರಿ ಎಂದರೆ ಸಾಕ್ಷಿ ವಾಹನವನ್ನು ನಿಲ್ಲಿಸಿ ಸುಮಾರು 75 ಮೀಟರ್ ನಡೆದುಕೊಂಡು ಹೋಗಿ 20 ರಿಂದ 25 ಮೀಟರ್ ದೂರದಿಂದ ನೋಡಿರುತ್ತೇವೆ. ಆರೋಪಿತರು ನಿಂತುಕೊಂಡಿದ್ದರು ಎಂಬ ಬಗ್ಗೆ ನನ್ನ ವರದಿಯಲ್ಲಿ ನಮೂದು ಮಾಡಿರುವುದಿಲ್ಲ. ಕೋಳಿಯಂಕಕ್ಕೆ ಉಪಯೋಗಿಸುವ ಅಂಕಣ ಇದೆ ಎಂದರೆ ಸರಿ. ಅದನ್ನು ಕೆತ್ತಿ ಸ್ವಚ್ಛಗೊಳಿಸಿ ಬೇಕಾದ ರೀತಿಯಲ್ಲಿ ಸರಿ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಆ ರೀತಿ ಅಂಕಣ ಮತ್ತು ಕೋಳಿಗಳನ್ನು ಕಟ್ಟಿ ಹಾಕಲು ಹೊಡೆದ ಗೂಟಗಳ ಬಗ್ಗೆ ಮಹಜರ್ ನಲ್ಲಿ ನಮೂದು ಮಾಡಿರುವುದಿಲ್ಲ. ಸ್ವಾಧೀನಪಡಿಸಿಕೊಂಡ ಹಣ ನೆಲದಲ್ಲಿ ಚೆಲ್ಲಿತ್ತಾ ಎಂದರೆ ಸಾಕ್ಷಿ ಕಿಸೆಯಲ್ಲಿ ಇದ್ದದ್ದನ್ನು ತೆಗೆದುಕೊಟ್ಟಿದ್ದಾರೆ ಎಂದು ಹೇಳುತ್ತಾರೆ. ಆ ದಿನ ಸ್ವಾಧೀನಪಡಿಸಿಕೊಂಡ ಹಣಕ್ಕೆ ಕ್ರಮ ಸಂಖ್ಯೆ ಇರುವ ಬಗ್ಗೆ ನಮೂದು ಮಾಡಿದ್ದೀರಾ ಎಂದರೆ ಇಲ್ಲ. ಯಾವ ಮುಖಬೆಲೆಯ ಯಾವ ನೋಟುಗಳನ್ನು ಸ್ವಾಧೀನಪಡಿಸಿಕೊಂಡಿದ್ದಾರೆ ಎಂದು ನಮೂದು ಮಾಡಿದ್ದರೆ ಮಾತ್ರ ಗುರುತು ಹಚ್ಚಲು ಸಾಧ್ಯ ಎಂದರೆ ಸಾಕ್ಷಿ ನಮೂದು ಮಾಡಿಲ್ಲ ಎಂದು ಹೇಳುತ್ತಾರೆ.

2. ಅಮಾನತುಪಡಿಸಿಕೊಂಡ ಬಾಳುಗಳು ಎರಡು ಒಂದೇ ತರಹದ ಬಾಳುಗಳಾಗಿರುತ್ತವೆ. ನ್ಯಾಯಾಲಯದ ಮುಂದಿರುವ ಮು.ಮಾ2 ಒಂದು ಉದ್ದ ಹಾಗೂ ಇನ್ನೊಂದು ಸ್ವಲ್ಪ ತುಂಡ ಎಂದರೆ ಸರಿ. ಯಾವ ಬಣ್ಣದ ಹಗ್ಗವನ್ನು ಸ್ವಾಧೀನಪಡಿಸಿಕೊಂಡಿದ್ದೇನೆ ಎಂದು ಈಗ ನೆನಪಿಲ್ಲ. ಮು.ಮಾ1 ರಲ್ಲಿ ಇನ್ನೊಂದು ಬಣ್ಣದ ನೂಲು ಇದೆ ಎಂದರೆ ಸರಿ. ಯಾವ ತರಹದ ಕೋಳಿಗಳನ್ನು ಸ್ವಾಧೀನಪಡಿಸಿಕೊಂಡಿದ್ದೀರಿ ಎಂದರೆ ಸಾಕ್ಷಿ 5 ವಿವಿಧ ಜಾತಿಯ ಕೋಳಿಗಳನ್ನು ಸ್ವಾಧೀನಪಡಿಸಿಕೊಂಡಿದ್ದೇವೆ ಎಂದು ಹೇಳುತ್ತಾರೆ. ಕೋಳಿಯಂಕಕ್ಕೆ ಉಪಯೋಗಿಸುವ ಕೋಳಿಗಳಲ್ಲಿ ಬೇರೆ ಬೇರೆ ಜಾತಿಯ ಕೋಳಿಗಳು ಇವೆ ಎಂದರೆ ನನಗೆ ಗೊತ್ತಿಲ್ಲ. ಆ ಬಗ್ಗೆ ಆರೋಪಿಯಲ್ಲಿ ಕೇಳಲು ಪ್ರಯತ್ನಿಸಿದ್ದೀರಾ ಎಂದರೆ ಇಲ್ಲ. ಕೋವಿಡ್ ಸಂದರ್ಭದಲ್ಲಿ ಪ್ರಕರಣ ದಾಖಲಿಸುವ ಬೇಕಾಗಿ ಸುಳ್ಳು ಪ್ರಕರಣವನ್ನು ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ. ಆ ದಿನ ಯಾವುದೇ ಕೋಳಿಯಂಕ ನಡೆದಿಲ್ಲ ಎಂದರೆ ಸರಿಯಲ್ಲ. ಠಾಣಾ ಅಂಕಿಅಂಶಕ್ಕೆ ಬೇಕಾಗಿ ಆರೋಪಿತರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಪ್ರಕರಣಕ್ಕೆ ಸಂಬಂಧಪಟ್ಟ ಎಲ್ಲಾ ದಾಖಲಾತಿಗಳನ್ನು ಠಾಣೆಯಲ್ಲಿ ತಯಾರಿಸಿದ್ದೇವೆ ಎಂದರೆ ಸರಿಯಲ್ಲ. ಆರೋಪಿತರಿಂದ ಯಾವುದೇ ವಸ್ತುಗಳನ್ನು ಸ್ವಾಧೀನಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿತರಿಗೂ ಪ್ರಕರಣಕ್ಕೂ ಯಾವುದೇ ರೀತಿ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಬೆಳ್ತಂಗಡಿ

(ಸಾ.ಓ.ಹೇ.ಕೇ.ಸ.ಇ.ಎ.ಒ)